CLASS:3

SUBJECT :KANNADA

TOPIC :14

SRVK /SSVK
SHIVANAHALLI

ಘಟಕ 2

ಬುದ್ಧಿವಂತ ಮಂತ್ರಿ

ವಿಜಯನಗರದ ಸಾಮ್ರಾಟ ಶ್ರೀಕೃಷ್ಣದೇವರಾಯ. ಅವನ ರಾಜಧಾನಿ ಹಂಪೆ. ಅದು ಇಡೀ ಜಗತ್ತಿನಲ್ಲಿ ಪ್ರಸಿದ್ಧವಾಗಿತ್ತು. ಆ ರಾಜ್ಯದಲ್ಲಿ ತಿಮ್ಮರಸು ಎಂಬ ಮಂತ್ರಿ ಇದ್ದನು. ಅವನು ಬುದ್ಧಿವಂತಿಕೆಗೆ ಹೆಸರಾಗಿದ್ದನು. ಶ್ರೀ ಕೃಷ್ಣದೇವರಾಯ ಆತನನ್ನು ಅಪ್ಪಾಜಿ ಎಂದು ಕರೆದು ಗೌರವಿಸುತ್ತಿದ್ದನು.

ಅಪ್ಪಾಜಿಯ ಕೀರ್ತಿ ಎಲ್ಲಾ ಕಡೆಗೂ ಹಬ್ಬಿತ್ತು. ಅದು ಕಳಿಂಗ ರಾಜನ ಕಿವಿಗೂ ಬಿತ್ತು. ರಾಜನಿಗೆ ಅಪ್ಪಾಜಿಯ ಚತುರತೆಯನ್ನು ಪರೀಕ್ಷಿಸುವ ಬಯಕೆ ಉಂಟಾಯಿತು.

ವಿಜಯನಗರದ ಅರಸನಿಗೆ ಕಳಿಂಗರಾಜು ಒಂದು ಮನವಿ ಕಳುಹಿಸಿದನು. "ನಿಮ್ಮ ರಾಜ್ಯದಲ್ಲಿ ಬೆಳೆಯುವ ಸುಂದರವಾದ ಗುಲಾಬಿ ಹೂಗಳು ನಮ್ಮ ರಾಣಿಯ ಮನಸ್ಸನ್ನು ಆಕರ್ಷಿಸಿವೆ. ಒಂದಿಷ್ಟು ತಾಜಾ ಗುಲಾಬಿ ಹೂಗಳನ್ನು ಕಳುಹಿಸಿ ಕೊಡಿ" ಎಂದು ವಿನಂತಿಸಿದನು. ಅದನ್ನು ಓದಿ ಕೃಷ್ಣದೇವರಾಯನಿಗೆ ಅಚ್ಚರಿಯೂ, ಚಿಂತೆಯೂ ಆಯಿತು. ಕಳಿಂಗ ರಾಜ್ಯಕ್ಕೆ ನಡೆದುಕೊಂಡು ಹೋದರೆ ಸುಮಾರು ಮೂರು ತಿಂಗಳ ಪ್ರಯಾಣ. ಅಲ್ಲಿಗೆ ಸೇರುವಷ್ಟರಲ್ಲಿ ಹೂಗಳು ಬಾಡಿ ಹೋಗುವುವು. ತಾಜಾ ಹೂಗಳನ್ನು ಕಳುಹಿಸಿಕೊಡುವುದು ಹೇಗೆ? ಎಂದು ಯೋಚಿಸಿದನು. ಈ ಸಮಸ್ಯೆಯನ್ನು ದೊರೆ ಎಲ್ಲರಿಗೂ ವಿವರಿಸಿದನು. ಯಾರಿಗೂ ಉಪಾಯ ಹೊಳೆಯಲಿಲ್ಲ.

Scanned with CamScanner